ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹುದ್ದೆಗಳ ಸಂಖ್ಯೆ ಎಷ್ಟು?

೨. ಸದರಿ ಹುದ್ದೆಗಳು ಭರ್ತಿಯಾಗಿ, ಬಡ್ತಿಯ ನಂತರ ಬೇರೆ ಸ್ಥಳಗಳಿಗೆ ನಿಯೋಜಿಸದೆ ಇರುವ ಅಧಿಕಾರಿಗಳ ಸಂಖ್ಯೆ ಎಷ್ಟು?

೩. ಹುದ್ದೆಗಳ ಅವಶ್ಯಕತೆ ಇಲ್ಲದೆ ಬಡ್ತಿ ನೀಡಲು ಕಾರಣವೇನು?

೪. ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ೧೪೪೪

೨. ಬಡ್ತಿಯ ನಂತರ ಬೇರೆ ಸ್ಥಳಗಳಿಗೆ ನಿಯೋಜಿಸದೇ ಇರುವ ಅಧಿಕಾರಿಗಳು ಯಾರು ಇರುವುದಿಲ್ಲ

೩. ಖಾಲಿ ಇರುವ ಹುದ್ದೆಗಳನ್ನು ಗಮನದಲ್ಲಿಟ್ಟುಕೊಂಡು ಬಡ್ತಿ ನೀಡಲಾಗುತ್ತಿದೆ.

೪. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ರಸ್ತೆಗಳ ಡಾಂಬರೀಕರಣಕ್ಕೆ ಹಣ ಬಿಡುಗಡೆ.

೨೧೪೨(೨೮೪೦)

ಶ್ರೀ ನಾರಾಯಣ ಸ್ವಾಮಿ ಎ.(ಆನೇಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಸ್ತೆಗಳ ಡಾಂಬರೀಕರಣಕ್ಕೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ೧೫ ಲಕ್ಷಗಳನ್ನು ವಾರ್ಷಿಕವಾಗಿ ಬಿಡುಗಡೆ ಮಾಡುತ್ತಿದ್ದುದು ನಿಜವಲ್ಲವೇ?

ಆ. ಹಾಗಿದ್ದಲ್ಲಿ ಈ ಸಾಲಿನ ಸದರಿ ಹಣ ಏಕೆ ಬಿಡುಗಡೆ ಮಾಡಲಿಲ್ಲ; ಇದಕ್ಕೆ ಕಾರಣವೇನು?

ಇ. ಹಿಂದಿನಂತೆ ಪ್ರತಿ ಕ್ಷೇತ್ರಕ್ಕೆ ರಸ್ತೆ ಅಭಿವೃದ್ಧಿಗಾಗಿ ೫ ಲಕ್ಷ ರೂ.ಗಳನ್ನು ಬಿಡುಗಡೆ

ಮಾಡಲು ತೊಂದರೆಯೇನು; ತೊಂದರೆ ಇಲ್ಲದಿದ್ದಲ್ಲಿ ಕಳಪೆಯಾಗಿರುವ ಈ ರಸ್ತೆಗಳ ಅಭಿವೃದ್ಧಿಪಡಿಸಲು ಹಣ ಬಿಡುಗಡೆ ಮಾಡುವುದು ಎಂದು?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ. ರಸ್ತೆಗಳ ಡಾಂಬರೀಕರಣಕ್ಕೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ೧೫.೦೦ ಲಕ್ಷ ರೂ.ಗಳನ್ನು ವಾರ್ಷಿಕವಾಗಿ ಬಿಡುಗಡೆ ಮಾಡುವ ಕಾರ್ಯಕ್ರಮವಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಪ್ರತಿ ಕ್ಷೇತ್ರಕ್ಕೆ ರಸ್ತೆ ಅಭಿವೃದ್ಧಿಗಾಗಿ ೫.೦೦ ಲಕ್ಷ ರೂ.ಗಳ ಬಿಡುಗಡೆ ಮಾಡುವ ಯೋಜನೆ ಯಾವುದೂ ಇರುವುದಿಲ್ಲ. ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ರಸ್ತೆ ದುರಸ್ತಿ ಮಾಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜರಗುವ ಅಪರೂಪದ ''ಕಂಬಳ'' ಜಾನಪದ ಕ್ರೀಡೆಗೆ ಅನುದಾನ ಅಥವಾ ಸಹಾಯಧನ.

೨೧೪೪(೨೬೬೪)

ಶ್ರೀ ಕೆ.ಪ್ರಭಾಕರ ಬಂಗೇರ(ಬೆಳ್ತಂಗಡಿ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಅಪರೂಪದ ಕಂಬಳ ಜಾನಪದ ಕ್ರೀಡೆಯನ್ನು ಪ್ರೋತ್ಸಾಹಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು? ಅಪಾರ ವೆಚ್ಚತಗಲುವ ಈ ಕ್ರೀಡೆಯನ್ನು ಏರ್ಪಡಿಸಲು ಸರ್ಕಾರ ಸಹಾಯ ಧನ ನೀಡುವುದೇ?

ಆ) ಹಲವಾರು ಅನಾನುಕೂಲತೆಗಳನ್ನು ಎದುರಿಸುತ್ತಿರುವ ಈ ಕ್ರೀಡೆಗೆ ಶಾಶ್ವತ ಕ್ರೀಡಾಂಗಣವನ್ನು ನಿರ್ಮಿಸುವ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಇ) ಕಂಬಳ ಕ್ರೀಡಾಪಟುಗಳಿಗೆ ಕಲಾವಿದರಿಗೆ ನೀಡುವ ರೀತಿಯಲ್ಲಿ ಮಾಸಾಶನವನ್ನು ಅಥವಾ ಪ್ರೋತ್ಸಾಹ ಧನವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಕಂಬಳ ಕ್ರೀಡೆಯನ್ನು ಪ್ರೋತ್ಸಾಹಿಸಲು